– ಆತ್ಮ ತನ್ನ ಸಂಗಾತಿಯನ್ನು ತಾನೇ ಆಯ್ಕೆ ಮಾಡಿಕೊಂಡು ಬಾಗಿಲು ಹಾಕಿಕೊಂಡು ಬಿಡುತ್ತದೆ... ಆಮೇಲೆ ಯಾರೇ ಬರಲಿ ಕದ ತೆರೆಯುವುದಿಲ್ಲ... ಚಕ್ರವರ್ತಿಯೇ ಬಂದು ಮಂಡಿಯೂರಿ ಬೇಡಿಕೊಂಡರೂ ಸರಿ. ಬದಲಾಗುವುದಿಲ್ಲ ಅವಳ ಒಳಗಿನೊಳಗಿನ ನಿರ್ಧಾರ! ಅಂದರೆ, ತಾನು ಹಾಗೆ ದೃಢವಾಗಿ ನಿರ್ಧರಿಸಿ ಆಗಿಹೋಗಿದೆಯೇ? ಸೂರ್ಯಮಣಿ ಹೇಳಿದ್ದ ಒಳ ದನಿ ಅಂದರೆ ಇದೇ?

★★★

ಅದೊಂದು ತಿಂಗಳು ಸರಣಿಯಲ್ಲಿ ಮೂರು ದಿನ ರಜೆ ಇತ್ತು. ಅವರು ಮೊದಲೇ ಯೋಜನೆ ಹಾಕಿಕೊಂಡ ಹಾಗೆ, ಮೊದಲನೇ ದಿನ ಮೇಘನಾದನ್ ತನ್ನ ಕಾರಿನಲ್ಲಿ ಬೆಳಗಿನ ಉಪಾಹಾರಕ್ಕೆ ಪರಿಣತಿಯ ಮನೆಗೆ ಬಂದ. (ಆದರೆ, ಆವತ್ತು ತಿಂಡಿಯನ್ನು ತಿಂದಿದ್ದು ಮಾತ್ರ ಒಬೆರಾಯ್‌ದಲ್ಲಿ) ಆಮೇಲೆ, ಮತ್ತೆ ಪರಿಣತಿಯ ಮನೆಗೆ ಬಂದು, ಮಾತು... ಮಾತು ಮಾತು... ಮಧ್ಯಾಹ್ನ ಹಸಿವಾದಾಗ 'ಚೈನೀಸ್ ಹಂಗರ್ ಹಟ್'ಗೆ ಹೋದರು. ಮತ್ತೆ ಮನೆಗೇ ಬಂದು ಮಾತು – ನಿನ್ನೆಯ ಬಗ್ಗೆ ಮಾತು, ನಾಳೆಯ ಬಗ್ಗೆ ಮಾತು... ಏಕಾದರೂ ಸಂಜೆ ಆಯಿತೋ ಅಂದುಕೊಳ್ಳುತ್ತ, ಮರುದಿನ ಮೇಘನಾದನ್ ಮನೆಯಲ್ಲಿ ಮತ್ತೆ ಇಬ್ಬರೂ ಸೇರುವ ಒಪ್ಪಂದದೊಂದಿಗೆ ಆ ದಿನ ಮುಗಿಯಿತು.

ಆವತ್ತು ರಾತ್ರಿ ಬಹಳ ಹೊತ್ತು ಪರಿಣತಿಗೆ ನಿದ್ದೆ ಬರಲಿಲ್ಲ. ಒಂದು ಕ್ಷಣ ಅಕ್ಕನೊಂದಿಗೆ ಎಲ್ಲವನ್ನೂ ಹಂಚಿಕೊಳ್ಳಬೇಕೆಂದು ಅನ್ನಿಸಿತು. ಯಾಕೋ ಇಷ್ಟು ಬೇಗ ಬೇಡವೆನ್ನಿಸಿತು. ಶ್ರೀಧರಮೂರ್ತಿಗಳಿಗೆ ಇಷ್ಟು ತಡವಾಗಿ ತಿಳಿಸುವುದು ಬೇಡ ಅನ್ನಿಸಿ ಸುಮ್ಮನಾದಳು. ಆವತ್ತು ಬೆಳಗ್ಗೆಯಿಂದ ಸಂಜೆಯವರೆಗೆ ನಡೆದುದೆಲ್ಲವನ್ನೂ ನೆನಪುಮಾಡಿಕೊಳ್ಳುತ್ತಾ ಕಣ್ಣು ಅರಳಿಸಿ ಮಲಗಿಕೊಂಡೆ ಇದ್ದಳು. ಅವಳ ಕಣ್ಣ ಮುಂದೆ ಒಂದೊಂದೇ ಚಿತ್ರಗಳು ಮೂಡತೊಡಗಿದವು. ಅಕ್ಕ, ಸೂರ್ಯಮಣಿ, ಕೊನೆಗೆ ಪುಟಾಣಿ ಸಮ್ಮತಿ – ಶಾಲೆಯ ಯೂನಿಫಾರ್ಮಿನಲ್ಲಿ! ತಾನು ಒಂದು ಕಾಲದಲ್ಲಿ ಓದಲು ಅಸಹ್ಯಪಟ್ಟುಕೊಳ್ಳುತ್ತಿದ್ದ ಲಾರೆನ್ಸ್–ಹೆಮಿಂಗ್ವೇ... ಮುರಕಾಮಿ... ಇವರೆಲ್ಲಾ ಇದೀಗ ಇಷ್ಟವಾಗತೊಡಗಿದ್ದಾರೆ – ಯಾಕೆ? ಮೇಘನಾದನ್‌ಗೆ ಇಷ್ಟವೆಂದೇ? ಅವನ ಇಷ್ಟದ ಎಷ್ಟೊಂದು ಸಿನಿಮಾ, ಕತೆ ಕಾದಂಬರಿಗಳನ್ನು ಮೆಚ್ಚತೊಡಗಿದ್ದೇನೆ... ಎಲ್ಲೆಲ್ಲೂ ವಿಜೃಂಭಿಸಿದ ಮೇಘನಾದನ್! ತಾನು ಶರಣಾಗುತ್ತಿದ್ದೇನೆಯೇ? ಯಾವುದಕ್ಕೆ? ಉರಿಬಿಸಿಲಿನಲ್ಲೂ ಕರುಳೂದಿ ಹಾಡುವ ಕೋಗಿಲೆಗೆ? ಬಿಳಿ ಮೋಡವನ್ನು ಕಪ್ಪು ಮೋಡವೆಂದುಕೊಂಡು ಕುಣಿಯುವ ನವಿಲಿಗೆ? ಇದೆಲ್ಲ ಪ್ರಕೃತಿಯ ಹುನ್ನಾರವೇ?

ಪರಿಣತಿ ಮೆಲ್ಲನೆ ದಿಂಬಿನ ಪಕ್ಕದಲ್ಲಿಯೇ ಇದ್ದ ಫೋನಿಗೆ ಕೈ ಹಾಕಿದಳು... ರಾತ್ರಿ ಹನ್ನೆರಡೂವರೆ! ಮೇಘನಾದನ್ ಇನ್ನೂ ಆನ್ ಲೈನಲ್ಲಿದ್ದ. ಸುಮ್ಮನೆ ಅವನಿಗೆ 'Hi' ಹಾಕಿದಳು. ತಕ್ಷಣ ಅವನು 'Hi' ಹಾಕಿದ!

''ಇನ್ನೂ ಮಲಗಿಲ್ಲವಾ?''

''ಉತ್ತರ ಗೊತ್ತಿದ್ದೂ ಪ್ರಶ್ನೆ ಕೇಳುತ್ತೀಯಲ್ಲ ಪರಿ? ನೀನು ಯಾಕಿನ್ನೂ ಮಲಗಿಲ್ಲ?''

''ನಿದ್ದೆ ಬರ್ತಿಲ್ಲ ಮೇಘ. ಏನು ಯೋಚಿಸುತ್ತಾ ಇದೀಯ?''

''ನೋಡು! ಮತ್ತೆ ಅದೇ! ಉತ್ತರ ಗೊತ್ತಿದ್ದೂ ಪ್ರಶ್ನೆ! ಹೇಳು, ನೀನು ಏನ್ ಯೋಚಿಸ್ತಾ ಇದೀಯ?''

''ಇನ್ನೇನು ಯೋಚನೆ? ನನ್ನ ಜೀವನ ಸಂಗಾತಿ ಬಗ್ಗೆ ಅಷ್ಟೆ! ಆಯ್ಕೆ ಅಂತೂ ಮುಗೀತು!''

''ಹೌದಾ!? ಯಾರು ಆ ಪಾಪಿ?''

''ಅಯ್ಯೋ! ಎಲ್ಲ ಒಮ್ಮೆಲೇ ಹೇಳಿಬಿಟ್ರೆ ಹ್ಯಾಗೆ? ಜೀವನದಲ್ಲಿ ಸಸ್ಪೆನ್ಸ್ ಇರಬೇಡವೇ?''

''ಹೇಳು ಪರಿ, ನೆಮ್ಮದೀಲಿ ನಿದ್ದೆ ಮಾಡ್ತೀನಿ... ಪ್ಲೀಸ್''